ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 945 ಗ್ರಾಪಂಅ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 27.09.2018

# ಅಧಿಕೃತ ಜ್ಞಾಪನ

ವಿಷಯ: ದಿನಾಂಕ 02.10.2018ರಂದು ನಡೆಯಲಿರುವ ಗಾಂಧಿ ಗ್ರಾಮ ಪುರಸ್ಕಾರ ಪ್ರದಾನ ಸಮಾರಂಭದ ಸಿದ್ಧತೆಗಳ ಜವಾಬ್ದಾರಿ ಹಂಚಿಕೆ ಮಾಡುವ ಬಗ್ಗೆ.

***

ದಿನಾಂಕ 02.10.2018ರಂದು ಇಲಾಖೆಯ ವತಿಯಿಂದ 2017-18ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಭಾಜನರಾದ ಗ್ರಾಮ ಪಂಚಾಯತಿಗಳಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದ ಸಿದ್ಧತೆಯನ್ನು ಮಾಡಲು ಈ ಕೆಳಗಿನಂತೆ ವಿವಿಧ ಸಮಿತಿಗಳನ್ನು ರಚಿಸಿ, ಜವಾಬ್ದಾರಿಗಳನ್ನು ವಹಿಸಲಾಗಿದೆ. ವಹಿಸಿದ ಜವಾಬ್ದಾರಿಗಳನ್ನು ಕಟ್ಟುನಿಟ್ಟಾಗಿ ನಿರ್ವಹಿಸಿ ಸಮಾವೇಶವನ್ನು ಯಶಸ್ವಿಗೊಳಿಸಲು ತಿಳಿಸಿದೆ. ಉಪಸಮಿತಿಗಳ ಮುಖ್ಯಸ್ಥರು ಹಾಗೂ ಸದಸ್ಯರು ಅಗತ್ಯವಿರುವ ಅಧಿಕಾರಿ/ನೌಕರರ ನೆರವು ಪಡೆಯಬಹುದಾಗಿದೆ.

## ಉಪಸಮಿತಿಗಳು:

| ಕ್ರ. ಸಂ. | ಉಪಸಮಿತಿ | ವಹಿಸಿರುವ ಜವಾಬ್ದಾರಿಗಳು | ಜವಾಬ್ದಾರಿ ವಹಿಸಿರುವ ಅಧಿಕಾರಿಗಳ ವಿವರ |
|---|---|---|---|
| 1 | ಸ್ವಾಗತ ಸಮಿತಿ: | • ಗಣ್ಯರು, ಆಹ್ವಾನಿತರಾದಿಯಾಗಿ ಸರ್ವರಿಗೂ ಆಹ್ವಾನ ಪತ್ರಿಕೆಗಳನ್ನು ಸಕಾಲದಲ್ಲಿ ವಿತರಣೆ ಮಾಡುವುದು.<br>• ಗಣ್ಯರನ್ನು ಸ್ವಾಗತಿಸಿ, ಸತ್ಕರಿಸಿ, ನಿರ್ಗಮಿಸುವವರೆಗೂ ಶಿಷ್ಟಾಚಾರ ಪಾಲಿಸಿ ಮೇಲ್ವಿಚಾರಣೆ ಮಾಡುವುದು. | 1) ಡಾ॥ ಸಿದ್ಧರಾಮಯ್ಯ, ಉಪಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತಿ<br>2) ಶ್ರೀ ನೋಮೇಶ್ ಕುಮಾರ್, ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯತಿ |
| 2 | ವೇದಿಕೆ ಮತ್ತು ಸಭಾಂಗಣ ಸಮಿತಿ: | • ವೇದಿಕೆ ವಿನ್ಯಾಸ, ವ್ಯವಸ್ಥೆ, ಆಸನ ವ್ಯವಸ್ಥೆ, ಅತಿಥಿ ಸತ್ಕಾರ(ಹೂಗುಚ್ಛ, ನೆನಪಿನ ಕಾಣಿಕೆ, ಕುಡಿಯುವ ನೀರು, ಲಘು ಉಪಹಾರ), ಸ್ವಾಗತ, ಉದ್ಘಾಟನೆ, ಇನ್ನಿತರೆ ಎಲ್ಲಾ ಏರ್ಪಾಟುಗಳನ್ನು ಮಾಡುವುದು.<br>• ಯಾವುದೇ ಗೊಂದಲಗಳಿಗೆ ಅವಕಾಶ ನೀಡದಂತೆ, ಪುರಸ್ಕೃತರು ಶಿಸ್ತಾಗಿ ಒಬ್ಬೊಬ್ಬರಾಗಿ ವೇದಿಕೆಗೆ ಬಂದು ಪ್ರಶಸ್ತಿ ಪಡೆಯುವಂತೆ ನೋಡಿಕೊಳ್ಳುವುದು.<br>• ಸಭಾಂಗಣದಲ್ಲಿ ಆಹ್ವಾನಿತರಿಗೆ ಜಿಲ್ಲಾವಾರು ಆಸೀನರಾಗಲು ಅನುಕೂಲವಾಗುವಂತೆ ಪ್ರತ್ಯೇಕ ಆಸನ ವ್ಯವಸ್ಥೆ ಮಾಡುವುದು.<br>• ಕಾರ್ಯಕ್ರಮದಲ್ಲಿ ಭಾಗವಹಿಸುವ ಗಣ್ಯ ಅತಿಥಿಗಳಿಗೆ, ಪತ್ರಕರ್ತರಿಗೆ ಪ್ರತ್ಯೇಕ ವಿಶೇಷ ಆಸನ ವ್ಯವಸ್ಥೆ ಕಲ್ಪಿಸುವುದು.<br>• ಜಿಲ್ಲಾವಾರು ನಿಗಧಿಪಡಿಸಿದ ಸ್ಥಳಗಳಿಗೆ, ಗುರುತಿಸಲು ಅನುಕೂಲವಾಗುವಂತೆ ನಾಮಫಲಕ ಅಳವಡಿಸುವುದು.<br>• ಒಟ್ಟಾರೆ ಯಾವುದೇ ಗೊಂದಲಗಳಿಗೆ ಆಸ್ಪದವಾಗದಂತೆ ಸಭಾಂಗಣ ನಿರ್ವಹಿಸುವುದು. | 1) ಶ್ರೀ ಕರಿಯಪ್ಪ, ಉಪಕಾರ್ಯದರ್ಶಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿ<br>2) ಶ್ರೀ ಅಶ್ವತ್ಥರೆಡ್ಡಿ, ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು ಪಂಚಾಯತಿ |

| | | | |
|---|---|---|---|
| 3 | ಪ್ರಶಸ್ತಿ ಸಮಿತಿ | • ಗಣ್ಯರಿಗೆ ಹೂ-ಗುಚ್ಛ, ನೆನಪಿನ ಕಾಣಿಕೆ ಹಾಗೂ ಪುರಸ್ಕೃತರಿಗೆ ಪ್ರಶಸ್ತಿ ಪತ್ರ, ನೆನಪಿನ ಕಾಣಿಕೆಗಳನ್ನು ಸಂಬಂಧಪಟ್ಟವರಿಗೆ ವೇದಿಕೆ ಮೇಲೆ ವಿತರಿಸಲು ಅಗತ್ಯ ಕ್ರಮವಹಿಸುವುದು. | 1) ಶ್ರೀಮತಿ ಟಿ.ಆರ್.ಶೋಭಾ ಮುಖ್ಯ ಲೆಕ್ಕಾಧಿಕಾರಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿ |
| 4 | ಆಹಾರ ಸಮಿತಿ: | • ಗಣ್ಯ ಅತಿಥಿಗಳು ಹಾಗೂ ಆಹ್ವಾನಿತರಿಗೆ ಯಾವುದೇ ತೊಂದರೆಯಾಗದಂತೆ ಪ್ರತಿಯೊಬ್ಬರಿಗೂ ಸಮರ್ಪಕವಾಗಿ ಊಟೋಪಚಾರ ಆಗುವಂತೆ ಅವಶ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು.<br>• ಗಣ್ಯ ಅತಿಥಿಗಳಿಗೆ ಪ್ರತ್ಯೇಕ ಊಟದ ವ್ಯವಸ್ಥೆ ಮಾಡುವುದು. | 1) ಶ್ರೀ ಕೃಷ್ಣಪ್ಪ ಕೋಡಿಪಾಳ್ಯ, ನಿರ್ದೇಶಕರು(ಗ್ರಾಮೂಸೌ)<br>2) ಶ್ರೀ ಕಿಶೋರ್ ಕುಮಾರ್, ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ಪೂರ್ವ ತಾಲ್ಲೂಕು ಪಂಚಾಯತಿ |
| 5 | ನೋಂದಣಿ ಸಮಿತಿ: | • ಸಮಾರಂಭಕ್ಕೆ ಎಲ್ಲಾ ಆಹ್ವಾನಿತರನ್ನು ಜಿಲ್ಲಾವಾರು ಕೌಂಟರ್‌ಗಳನ್ನು ತೆರೆದು, ನೊಂದಾಯಿಸಿಕೊಂಡು, ಗುರುತಿನ ಚೀಟಿ ವಿತರಿಸಿ, ಕುಳಿತುಕೊಳ್ಳಬೇಕಾದ ಸ್ಥಳದ ಬಗ್ಗೆ ಮಾಹಿತಿ ನೀಡುವುದು.<br>• ವಿಧಾನ ಸೌಧದ ನಾಲ್ಕು ದ್ವಾರಗಳಲ್ಲಿ ಆಹ್ವಾನಿತರು ಸುಗಮವಾಗಿ ಪ್ರವೇಶ ಪಡೆಯುವಂತೆ ನೋಡಿಕೊಳ್ಳುವುದು. | 1) ಶ್ರೀ ಮುಬಾರಕ್ ಅಹ್ಮದ್, ಅಧೀನ ಕಾರ್ಯದರ್ಶಿ, ಗ್ರಾಮ ಪಂಚಾಯತಿ ಶಾಖೆ<br>2) ಶ್ರೀ ವಿ. ವೆಂಕಟೇಶ್, ಅಧೀನ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿ ಶಾಖೆ |

27/2/18

(ಎಂ.ಕೆ.ಕೆಂಪೇಗೌಡ)
ನಿರ್ದೇಶಕರು (ಪಂ.ರಾಜ್-1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿ:**
ಸಂಬಂಧಪಟ್ಟ ಅಧಿಕಾರಿಗಳಿಗೆ.